Corrected Book for 2nd Edition

108

ನಮ್ಮ ದೇಶ

(ಅಂಕೆ-ಸಂಖ್ಯೆಗಳ ವಿವರ ಸಹಿತ)

★

ಸಂಗ್ರಾಹಕ: ಕುಂಡ್ಲಿ ವಾಸುದೇವ ಶೆಣೈ.

(ವಿಸ್ತೀರ್ಣ, ಹವಾಮಾನ, ಭಾಷೆಗಳು, ಬಂದರುಗಳು, ಜನರು, ನಗರಗಳ, ರಾಜ್ಯಗಳು, ವಿವಿಧ ನಗರಗಳ ಜನಸಂಖ್ಯೆ, ಉನ್ನತ ಕಟ್ಟಡಗಳು, ಪ್ರಪ್ರಥಮ ಪದವೀಧರರು, ಗಣನೀಯ ಭಾರತೀಯರ ಜನನ—ಪುಣ್ಯತಿಥಿ. ಚಲಚ್ಚಿತ್ರ ಕೈಗಾರಿಕೆಯ ಪ್ರಥಮ ತಿಥಿಗಳು, ಪಾಕಿಸ್ತಾನದ ಸಂಕ್ಷಿಪ್ತ ಮಾಹಿತಿಯೊಂದಿಗೆ.)

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧*ಕೆಪ್ಪಟಿರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರ
ಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್
ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮*ಇಂಗ್ಲಿಷ್-ಕನ್ನಡ ಅರ್ಥಕೋಶ;
೯ ಲಂಚಕ್ಕೆ ಸಂಚಕಾರ (ದ್ವಿ. ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀ
ಕ್ಷೇತ್ರ ಧರ್ಮಸ್ಥಳ (ಚ. ಮುದ್ರಣ); ೧೨*ಜೀವದ ಮೌಲ್ಯ ಮತ್ತು ಇತರ ಕಥೆಗಳು;
೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗ
ಬಾಸಿಂಗ (ದ್ವಿ. ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು
(ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦
ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ-I(ದ್ವಿ. ಮುದ್ರಣ); ೨೨ ತಿರು
ಕ್ಕುರಲ್ (ದ್ವಿ. ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-II
(ದ್ವಿ. ಮು); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾರಾವತಾರ(ದ್ವಿ. ಮು);
೨೭*ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ. ಮುದ್ರಣ]; ೨೯ ಜಾಣ್ಮೆಯ ಒಗಟುಗಳು
(ದ್ವಿ. ಮು); ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದಶ
ನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ತರಾಬಿನ ಸಿಪಾಯಿ
ಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ;
೩೯ ಸತೀ ಸಾವಿತ್ರಿ (ದ್ವಿ. ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು;
೪೧ ಭಾರತದ ಮಂತ್ರಿಮಂಡಲಗಳು(ದ್ವಿ. ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರ
ತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾ
ಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು;
೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮ
ಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ
ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦
ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯವರ್;
೬೪ ಲೌಕಿಕ ನ್ಯಾಯಗಳು; ೬೫*ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭
ಜನಾಹರಣಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ
ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ;
೭೩ ಸೂಕ್ತಿಗಳು; ೭೪ ಉ. ಕ. ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯ
ದಲ್ಲಿ....; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆ
ಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧*
ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ
ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು
ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ;
೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ
ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ
ಲೋಕನೀತಿ. ೯೩ ಹೋಮಿಯೋಪತಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ;
೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತ
ರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ;
೧೦೦ ಭಕ್ತ ಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ; ೧೦೩ ಕೇರಳ ಜ್ಯೋತಿಷ.
೧೦೪ ಒಗಟುಗಳ ಗೊಂಚಲು. ೧೦೫ ಊರ-ಔಷಧಿಗಳು; ೧೦೬ ಮಂಡೆ ಅವಾಂತರ; ೧೦೭
ಜಗತ್ತಿನ ವಿಜ್ಞಾನಿಗಳು; ೧೦೮ ನಮ್ಮ ದೇಶ.

* ಈ ಗುರುತು ಹಾಕಿದ ಪ್ರಸ[illegible]ಮುಗಿದಿವೆ.

ನಮ್ಮ ದೇಶ

(ಭಾರತ: ಅಂಕೆ-ಸಂಖ್ಯೆಗಳು)

ವಿಸ್ತೀರ್ಣ

ಭಾರತವು, ಜಮ್ಮೂ ಮತ್ತು ಕಾಶ್ಮೀರ ಹಾಗು ಅಂಡಮಾನ ಮತ್ತು ನಿಕೋಬಾರ್ ದ್ವೀಪಗಳ ಸಹಿತ ಒಟ್ಟು 1,269,640 ಚದರ ಮೈಲುಗಳ ವಿಸ್ತೀರ್ಣವುಳ್ಳದಾಗಿದೆ.

ಭಾರತದ ನೆಲ ಗಡಿ(ಮೇರೆ)ಗಳು ಸುಮಾರು 8200 ಮೈಲುಗಳು; ಕಡಲ ದಂಡೆಯು ಒಟ್ಟು 3500 ಮೈಲುಗಳು.

ಭಾರತವು ಇಂಗ್ಲೆಂಡಿಗಿಂತ ಹದಿಮೂರು ಪಾಲು ಮತ್ತು ಜಪಾನಿಗಿಂತ ಎಂಟು ಪಾಲು ದೊಡ್ಡದಿದೆ. ಜಗತ್ತಿನಲ್ಲಿದು, ವಿಸ್ತಾರದಲ್ಲಿ ಏಳನೆಯದು. ವಾಯುವ್ಯದಲ್ಲಿ ಪಶ್ಚಿಮ ಪಾಕಿಸ್ಥಾನ, ಈಶಾನ್ಯದಲ್ಲಿ ಬರ್ಮ, ಪೂರ್ವ ಪಾಕಿಸ್ಥಾನ—ಭೂತಾನ—ನೇಪಾಲ ಮತ್ತು ತಿಬೇಟ್, ನೈಋತ್ಯದಲ್ಲಿ ಅರೇಬಿಯನ್ ಸಮುದ್ರ, ಮತ್ತು ಆಗ್ನೇಯದಲ್ಲಿ ಬಂಗಾಳ ಕೊಲ್ಲಿಯಿಂದ ಸುತ್ತುವರಿಯಲ್ಪಟ್ಟಿದೆ.

ಭಾರತವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ಮಾಡಬಹುದು. 1. ಹಿಮಾಲಯ ಪ್ರದೇಶ (ಪರ್ವತಪ್ರಾಂತ). 2. ಸಿಂಧೂ-ಗಂಗಾ ನದಿ ಬಯಲು. 3. ದಕ್ಷಿಣದ ಪೀಠಭೂಮಿ.

ಹವಾಮಾನ

ದೇಶದಲ್ಲಿ ವರ್ಷದ ನಾಲ್ಕು ತಿಂಗಳುಗಳಲ್ಲಿ ಮಳೆಯು ಇರುವ ಪ್ರದೇಶಗಳು ಹೆಚ್ಚು. ವರ್ಷ(ಮಳೆ)ಋತುಗಳು ಎರಡು ಇವೆ. ಜೂನ್ ತಿಂಗಳಿಂದ ಸಪ್ಟಂಬರ ವರೆಗಿನ ವರ್ಷಋತುವು ಮುಖ್ಯ; ಈ ಋತುವಿನಲ್ಲಿ ದೇಶದ ಅಧಿಕಭಾಗದಲ್ಲಿ ಚೆನ್ನಾಗಿ ಮಳೆಯಾಗುತ್ತದೆ. ಆದರೆ, ಮಧ್ಯ ಪ್ರದೇಶ ಮತ್ತು ಪೂರ್ವ ಪ್ರದೇಶಗಳಲ್ಲಿ ಕಡಿಮೆ. ಆ ಮೇಲೆ, ನವಂಬರ ತಿಂಗಳಲ್ಲಿ ಈ ವರ್ಷಗತಿಯು ಬದಲಾಗಿ, ಫೆಬ್ರುವರಿ ತನಕ ಆಗ್ನೇಯ ಭಾಗ

ದಲ್ಲಿ ಚೆನ್ನಾಗಿ ಮಳೆಯಾಗುವುದುಂಟು; ಈ ಕಾಲದಲ್ಲಿ, ಉಳಿದ ಪ್ರದೇಶಗಳಲ್ಲಿ ಮಳೆಯಿರುವುದಿಲ್ಲ. ತೀರಪ್ರದೇಶಗಳಲ್ಲಿ ಸುಮಾರು 60ರಿಂದ 120 ಇಂಚು ವರೆಗೆ ಮಳೆ ಬೀಳುತ್ತದೆ.

ಜಮೀನು

ಭಾರತದ ಸೇಕಡಾ 35ರಷ್ಟು ಜಮೀನು ಫಲವತ್ತಾದುದು; ಧಾರಾಳ ನೀರೂ ದೊರೆತು, ಬೆಳೆಗೆ ಉತ್ತಮವಾದುದು. ಸೇಕಡಾ 25ರಷ್ಟು ಜಮೀನು ಬಂಜರು ಬಿದ್ದಿದ್ದರೂ, ಬೆಳೆ ತೆಗೆಯಲು ಸಾಧ್ಯತೆಯುಳ್ಳುದು. ಸೇಕಡಾ 15ರಷ್ಟು ಪ್ರದೇಶವು ಅರಣ್ಯ. ಉಳಿದುದು ಮರುಭೂಮಿ ಮತ್ತು ಪರ್ವತಪ್ರಾಂತ.

ಭಾಷೆಗಳು

1951ನೇ ಖಾನೇಶುಮಾರಿಯಂತೆ, ಭಾರತದಲ್ಲಿ ಆಡಲ್ಪಡುವ ಭಾಷೆಗಳು ಒಟ್ಟು 845; ಇವುಗಳಲ್ಲಿ 63 ಭಾಷೆಗಳು ಭಾರತೇತರವಾಗಿವೆ. ಮುಖ್ಯಭಾಷೆಗಳು ಹನ್ನೆರಡು: 1. ಹಿಂದಿ. 2. ಬಂಗಾಳಿ. 3. ಮರಾಠಿ. 4. ಗುಜರಾಥಿ. 5. ಪಂಜಾಬಿ 6. ಕಾಶ್ಮೀರಿ. 7. ಕನ್ನಡ. 8. ತೆಲುಗು. 9. ಮಲೆಯಾಳ. 10. ತಮಿಳು. 11. ಒರಿಯಾ. 12. ಅಸ್ಸಾಮಿ. ಸೇಕಡಾ 16·6ರಷ್ಟು ಜನರು ಅಕ್ಷರಸ್ಥರು. (ಪ್ರಾಂತವಾರಾಗಿ ತಿರುಕೊಚ್ಚಿಯಲ್ಲಿ ಅಕ್ಷರಸ್ಥರು ಹೆಚ್ಚು—ಸೇಕಡಾ 46·4ರಷ್ಟು; ಅತಿಕಡಿಮೆ ಅಕ್ಷರಸ್ಥರ ಸಂಖ್ಯೆ ಉತ್ತರಪ್ರದೇಶದಲ್ಲಿ—ಸೇಕಡಾ 10·8.)

ಬಂದರುಗಳು

ಭಾರತದಲ್ಲಿ ಅತಿದೊಡ್ಡ ಬಂದರುಗಳು ಆರು: 1. ಮುಂಬಯಿ. 2. ಮರ್ಮಗೋವ. 3. ಕೊಚ್ಚಿ. 4. ಮದರಾಸು. 5. ಕಲ್ಕತ್ತ. 6. ಖಾಂಡ್ಲ.

ಎರಡನೇ ತರಗತಿಯ ಬಂದರಗಳು ಹದಿನೇಳು: 1. ಬೇಡಿ ಬಂದರ. 2. ಓಖಾ. 3. ಪೋರಬಂದರ. 4. ಸೂರತ್. 5. ಮಂಗಳೂರು. 6. ಕಲ್ಲಿಕೋಟೆ. 7. ಅಲ್ಲಪ್ಪಿ. 8. ಕ್ವೈಲನ್. 9. ತುತ್ತುಕೋಡಿ. 10. ಧನುಷ್ಕೋಡಿ. 11. ನಾಗಪಟ್ಟಣ. 12. ಕಾರಿಕಾಲ್. 13. ಕಡ್ಲೂರು. 14. ಪಾಂಡಿಚೇರಿ. 15. ಮಛಲೀಪಟ್ಣ. 16. ಕಾಕಿನಾಡ.

17. ವಿಶಾಖಪಟ್ಣ. (ಇವಲ್ಲದೆ ಚಿಕ್ಕಪುಟ್ಟ ಬಂದರುಗಳು ಸುಮಾರು 200 ಇವೆ.)

ಜನರು

ಭಾರತದ ಜನಸಂಖ್ಯೆ, 1951ನೇ ವರ್ಷದ ಖಾನೇಶುಮಾರಿಯಂತೆ 35,68,29,485. ಇದರಲ್ಲಿ ಸೇಕಡಾ 17·3ರಷ್ಟು ಮಂದಿ ನಗರಗಳಲ್ಲಿಯೂ ಉಳಿದವರು ಗ್ರಾಮಪ್ರದೇಶಗಳಲ್ಲಿಯೂ ವಾಸಿಸಿರುವರು. ಜನಸಂಖ್ಯೆಯು ಪ್ರತಿವರ್ಷ ಸೇಕಡಾ 1 ಪಾಲಷ್ಟು ಹೆಚ್ಚುತ್ತಿದೆ.

ಜನರ ಸರಾಸರಿ ಆಯುಷ್ಯವು 32 ವರುಷಗಳೆಂದು ಲೆಕ್ಕವಾಗಿದೆ. ಇದು, ಪಾಶ್ಚಾತ್ಯ ದೇಶಗಳೊಡನೆ ಹೋಲಿಸಿದಾಗ ಅತಿ ಕಡಿಮೆಯಿದೆ.

ಪ್ರತಿ ಒಂದುಸಾವಿರ ಗಂಡಸರಿಗೆ 947 ಹೆಂಗುಸರ ಸಂಖ್ಯೆಯಿದೆ.

ನಗರಗಳು

ಇಡೀ ದೇಶದಲ್ಲಿರುವ ನಗರಗಳು 3018. ಹಳ್ಳಿಗಳು 5,58,089. ಒಂದುಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ನಗರಗಳು 73. (ಇವುಗಳಲ್ಲಿ ಮಂಗಳೂರೂ ಒಂದು.)

ಸೇಕಡಾ 70ರಷ್ಟು ಜನರು, ತಮ್ಮ ಜೀವನಕ್ಕಾಗಿ ಕೃಷಿಯ ಮೇಲೆ ಅವಲಂಬಿಸಿರುವರು. ಉಳಿದವರು ಇತರ ಉದ್ಯೋಗಗಳಲ್ಲಿರುವರು.

ಮತಗಳು

ಹಿಂದೂಮತವೇ ಅತಿ ದೊಡ್ಡದು. 260,000,000 ಮಂದಿ ಅಥವಾ ದೇಶದ ಮುಕ್ಕಾಲಂಶ ಜನರು ಹಿಂದೂಗಳಾಗಿರುವರು. ಮುಸ್ಲೀಮರು 43,000,000; ಕ್ರೈಸ್ತರು 5,000,000; ಸಿಕ್ಖರು 4,000,000ದಿಂದ 5,000,000. ಬೌದ್ಧರು, ಜೈನರು, ಪಾರಸಿಗಳು ಮತ್ತು ಯಹೂದ್ಯರು—ಹೇಳಿಕೊಳ್ಳುವಷ್ಟು ದೊಡ್ಡ ಸಂಖ್ಯೆಯಲ್ಲಿಲ್ಲ.

ಬೆಳೆಗಳು—ಆಹಾರ

ಅಕ್ಕಿಯೇ ಪ್ರಧಾನ ಬೆಳೆಯೆನ್ನಬಹುದು. ಕೃಷಿ ಪ್ರದೇಶದಲ್ಲಿ. ಸೇಕಡಾ 30ರಷ್ಟು ಸ್ಥಳದಲ್ಲಿ ಭತ್ತ ಬೆಳೆಯುತ್ತದೆ (ಸುಮಾರು 8,000,000 ಎಕ್ರೆಗಳಲ್ಲಿ). ಆಹಾರಧಾನ್ಯಗಳು ಬೆಳೆವ ಒಟ್ಟು ಪ್ರದೇಶವು 246,000,000

ಎಕ್ರೆ. ಹೀಗಿದ್ದರೂ, ಭಾರತವು, ಇನ್ನೂ ಆಹಾರಸಾಮಗ್ರಿಗಳಲ್ಲಿ ಪೂರ್ಣವಾಗಿ ಸ್ವಯಂಪೂರ್ಣತೆಯನ್ನು ಹೊಂದಿಲ್ಲ.

ಬಂಗಾಳಕೊಲ್ಲಿ ಮತ್ತು ಅರಬೀಸಮುದ್ರದ ಪ್ರದೇಶಗಳು, ಒಳ್ಳೇ ಮೀನು ದೊರೆವ ಭೂಲೋಕದ ಒಳ್ಳೇ ಸ್ಥಳಗಳಲ್ಲಿ ಎರಡು.

ಜಾನುವಾರು

ದೇಶದಲ್ಲಿ 155 ಮಿಲಿಯ ಹಸುಗಳು, 43 ಮಿಲಿಯ ಎಮ್ಮೆಗಳು, ಮತ್ತು 39 ಮಿಲಿಯ ಕುರಿಗಳು ಇವೆ. ಇಲ್ಲಿಯ ಹಸುಗಳ ಸಂಖ್ಯೆಯು ಭೂಲೋಕದ ಜುಮ್ಲಾ ದನಗಳ ನಾಲ್ಕನೇ ಒಂದಂಶದಷ್ಟಿದೆ. (ಆದರೆ, ಹಲವು ದನಗಳು ಹೆಚ್ಚು ಹಾಲು ಕೊಡುವ ಜಾತಿಯವಲ್ಲ.) ಎಲ್ಲ ದನಗಳಿಂದ ವರ್ಷಕ್ಕೆ ದೊರೆಯಬಹುದಾದ ಹಾಲಿನ ಅಂದಾಜು 1440 ಮಿಲಿಯ ಮಣ (28 ರಾತ್ಲುಗಳ ಮಣ)—ಅಂದರೆ, ತಲಾ ದಿನಕ್ಕೆ 5·45 ಔನ್ಸು ಹಾಲು ದೊರೆವಂತಾಯಿತು.

ಅರಣ್ಯಸಂಪತ್ತು

ಭಾರತದ ಅರಣ್ಯಸಂಪತ್ತು ವಿಪುಲವಿದೆ. ದೇಶದ ಒಟ್ಟು ವಿಸ್ತೀರ್ಣದಲ್ಲಿ ಸೇಕಡಾ 15ರಷ್ಟು ಪ್ರದೇಶವು ಅರಣ್ಯವಾಗಿದ್ದು, ದೇಶಕ್ಕೆ ಬೇಕಾದ ಮರಮುಟ್ಟುಗಳೂ, ಉರುವಲವೂ, ಇವುಗಳಿಂದ ಧಾರಾಳ ದೊರೆಯುತ್ತಿದೆ. ಅರಗು, ನಾನಾ ತೈಲಗಳು, ಟರ್ಪೆಂಟಾಯಿನ್, ರೆಸಿನ್ ಮೊದಲಾದುವು ಈ ವನಸಂಪತ್ತಿನಲ್ಲಿ, ಉಪವಸ್ತುಗಳಾಗಿ ದೊರೆವ ಕೆಲವು ಮುಖ್ಯ ವಸ್ತುಗಳಾಗಿವೆ. ಉತ್ತಮ ಸಾಗುವಾನಿ, ಬೀಟೆ, ಬಿದಿರು, ದೊರೆಯುತ್ತಿದೆ.

ರಾಜ್ಯಗಳು

1956ನೆ ಅಕ್ಟೋಬರ ವರೆಗೆ ಇದ್ದ ರಾಜ್ಯಗಳು ಭಾಷಾವಾರಾಗಿ ಪೃಥಕ್ಕರಿಸಲ್ಪಟ್ಟು, 1956ನೇ ನವಂಬರ ತಾ. ೧ರಿಂದ ಈ ರಾಜ್ಯಗಳು:

ರಾಜ್ಯಗಳು	ವಿಸ್ತೀರ್ಣ (ಚದರ ಮೈಲುಗಳಲ್ಲಿ)	ಜನಸಂಖ್ಯೆ (ಮಿಲಿಯಗಳಲ್ಲಿ)
ಆಂಧ್ರಪ್ರದೇಶ	 110,250	.... 32·2
ಆಸ್ಸಾಮ್	 84,924	.... 9·0
ಬಿಹಾರ್	 67,830	.... 37·93

ಮುಂಬಯಿ	....	188,240	....	47·8
ಜಮ್ಮು-ಕಾಶ್ಮೀರ	....	92,780	....	4·4
ಕೇರಳ	....	14,980	....	13·6
ಮಧ್ಯಪ್ರದೇಶ	....	171,200	....	26·1
ಮದರಾಸು	....	50,170	....	30·0
ಮೈಸೂರು	....	72,730	....	19·0
ಒಡಿಸ್ಸ	....	60,140	....	14·6
ಪಂಜಾಬ	....	46,616	....	16·0
ರಾಜಸ್ಥಾನ	....	132,300	....	16·0.
ಉತ್ತರ ಪ್ರದೇಶ	....	113,410	....	63·2
ಪಶ್ಚಿಮ ಬಂಗಾಳ	....	33,279	....	26·16

1956ನೇ ನವಂಬರ ತಾ. 1ರಿಂದ, ರಾಜ್ಯಗಳೊಳಗಿನ ವರ್ಗಭೇದ (A-B-C) ತೆಗೆದುಹಾಕಲಾಗಿದೆ. "ರಾಜಪ್ರಮುಖರ" ಪದವಿ ರದ್ದಾಯಿತು. ಮೇಲಿನ ಹದಿನಾಲ್ಕು ರಾಜ್ಯಗಳಲ್ಲದೆ, ಕೇಂದ್ರಸರಕಾರದ ಅಡ್ಡಳಿತದಲ್ಲಿ ಈ ಆರು ರಾಜ್ಯಗಳಿರುವುವು: 1. ಅಂಡಮಾನ ಮತ್ತು ನಿಕೋಬಾರ-ದ್ವೀಪಗಳು. 2. ದಿಲ್ಲಿ. 3. ಹಿಮಾಚಲ ಪ್ರದೇಶ. 4. ಲಕ್ಷದ್ವೀಪ-ಅಮಿನ್‌ದಿವಿ ದ್ವೀಪಗಳು. 5. ಮಣಿಪುರ. 6. ತ್ರಿಪುರ.

ಖನಿಜಗಳು

ಭಾರತದಲ್ಲಿ ಲೋಹಮಂಡೂರ, ಅಭ್ರಕ ಮೊದಲಾದ ಅನೇಕ ಉಪಯುಕ್ತ ಖನಿಜಗಳಿವೆ. ಇಲ್ಲಿಯ ಕಬ್ಬಿಣದ ಅದುರಿನಲ್ಲಿ, ಸೇಕಡಾ 55ರಿಂದ 70ರಷ್ಟು ಕಬ್ಬಿಣದ ಅಂಶವಿದ್ದುದು ಜಾಗತಿಕ ದಾಖಲೆಯೆನಿಸಿದೆ. ಇದರಿಂದ, ಖೀಡು ಕಬ್ಬಿಣವು ಭಾರತದಲ್ಲಿ ಭೂಲೋಕದ ಇತರ ಕಡೆಗಳಿಗಿಂತ ಕಡಿಮೆ ವ್ಯಯದಲ್ಲಿ ತಯಾರಾಗುತ್ತದೆ.

ಭಾರತದಲ್ಲಿ 530 ಲಕ್ಷ ಟನ್ ಉಪ್ಪು ವರ್ಷಂಪ್ರತಿ ತಯಾರಾಗುತ್ತಿದೆ.

3,50,000 ಔನ್ಸ್ ಬಂಗಾರವು ವರ್ಷಕ್ಕೆ ತಯಾರಾಗುತ್ತದೆ.

ಪೆಟ್ರೋಲ್ ಉತ್ಪತ್ತಿಯಲ್ಲಿ, ಜಗತ್ತಿನಲ್ಲಿ, ಭಾರತಕ್ಕೆ ಹನ್ನೆರಡನೆಯ ಸ್ಥಾನ.

ವಾಣಿಜ್ಯ—ಕೈಗಾರಿಕೆಗಳು

ವಾಣಿಜ್ಯದಲ್ಲಿ ಭಾರತಕ್ಕೆ, ಜಗತ್ತಿನ ದೇಶಗಳಲ್ಲಿ ಐದನೆಯ ಸ್ಥಾನವಿದೆ. ಕೈಗಾರಿಕೆಗಳಲ್ಲಿ, ಮೊದಲಿನ ಹತ್ತು ರಾಷ್ಟ್ರಗಳಲ್ಲಿ ಭಾರತವು ಒಂದು. ಜಗತ್ತಿನ ಚಲಚ್ಚಿತ್ರ ಕೈಗಾರಿಕೆಯಲ್ಲಿ ಭಾರತದ ಸ್ಥಾನ ಮೂರನೆಯದು; ಸಕ್ಕರೆ ಉತ್ಪಾದನೆಯಲ್ಲೂ ಮೂರನೆಯದು.

ಭಾರತದ ರೈಲ್ವೆಯು ಆಸ್ಯಖಂಡದಲ್ಲಿ ದೊಡ್ಡದು; ಸರಕಾರದವರೇ ಕೈಕೊಂಡ ಉದ್ಯಮಗಳಲ್ಲಿ ಜಗತ್ತಿನಲ್ಲಿ ಎರಡನೆಯದು.

ಇಲ್ಲಿಯ ಸಿಮೆಂಟ್ ಕೈಗಾರಿಕೆಯು ಭಾರತದ ದೊಡ್ಡ ಕೈಗಾರಿಕೆಗಳಲ್ಲಿ ಎರಡನೆಯ ಸ್ಥಾನದಲ್ಲಿದೆ.

ಸಾರ್ವಜನಿಕ ಆರೋಗ್ಯ

ಭಾರತದಲ್ಲಿ ವರ್ಷಂಪ್ರತಿ ಇಪ್ಪತ್ತೈದು ಲಕ್ಷ ಜನರು ಕ್ಷಯರೋಗ ಪೀಡಿತರಾಗಿರುತಿದ್ದು, ಐದು ಲಕ್ಷ ಜನರು ಈ ರೋಗದಿಂದ ಮರಣಹೊಂದುತ್ತಿರುವರು. ಮಲೆಜ್ವರವೇ ಅತಿ ದೊಡ್ಡ ಮಾರಕ ರೋಗವಾಗಿದೆ. ಸುಮಾರು ಹತ್ತು ಕೋಟಿ ಜನರು ಮಲೆಜ್ವರ ಪೀಡಿತರಾಗಿದ್ದು, ವರ್ಷಕ್ಕೆ ಹತ್ತು ಅಥವಾ ಹದಿನೈದು ಲಕ್ಷ ಜನರು ಇದರಿಂದಲೇ ಮರಣಹೊಂದುತಿದ್ದಾರೆ. ಮರಣ ಸಂಖ್ಯೆ ಸಾವಿರಕ್ಕೆ 17·2ರಂತೆ; ಜನನ ಸಂಖ್ಯೆ ಸಾವಿರಕ್ಕೆ 25·5ರಂತೆ ಇದೆ.

ಜನಸಂಖ್ಯೆಯ ವಿವರ (1951ನೇ ಖಾನೇಶುಮಾರಿಯಂತೆ)

ಕಲ್ಕತ್ತ (ಹೌರಾ ಕೂಡಿ)—	33,44,839.	ಕಾನ್ಪುರ—	7,05,383.
ಮುಂಬಯಿ—	28,39,270.	ಪುಣೆ—	4,80,982.
ಮದರಾಸು—	14,16,057.	ಹೌರಾ—	4,33,630.
ಹೈದರಾಬಾದು—	10,85,722.	ಲಕ್ನೋ—	4,96,861.
ಡಿಲ್ಲಿ—	9,14,790.	ಆಗ್ರಾ—	3,75,665.
ನವಡಿಲ್ಲಿ—	2,76,314.	ಮಥುರೆ—	3,61,781.
ಅಹಮ್ಮದಾಬಾದ—	7,88,333.	ಬನಾರಸ—	3,55,777.
ಬೆಂಗಳೂರು—	7,78,977.	ಅಲಹಾಬಾದ್—	3,32,295.
		ಅಮೃತಸರ—	3,25,747.

ಇಂದೋರು—	3,10,859.
ಜೈಪುರ—	2,91,130.
ಪಾಟ್ನಾ—	2,83,472.
ಶೋಲಾಪುರ—	2,66,050.
ಜಾಬಲಪುರ—	2,56,998.
ಮೀರತ್—	2,33,183.
ಸೂರತ್—	2,23,182.
ಮೈಸೂರು—	2,44,323.
ಗ್ವಾಲಿಯರ್—	2,41,571.
ಬಡೋಡೆ—	2,11,407.
ಜಾಮ್ಶೇದಪುರ—	2,18,162.
ತಿರುಚಿರಪಳ್ಳಿ—	2,18,921.
ಬರೇಲಿ—	2,08,083.
ಸೇಲಂ—	2,02,335.
ಕೊಯಮುತ್ತೂರು-	1,97,755.
ತ್ರಿವೇಂಡ್ರಮ್—	1,86,931.
ಜೋಧಪುರ—	1,80,717.
ವಿಜಯವಾಡ—	1,61,198.
ಕೊಲ್ಹಾಪುರ—	1,36,835.
ಕಲ್ಲಿಕೋಟೆ—	1,58,724.
ಹುಬ್ಬಳ್ಳಿ—	1,29,609.
ಭಾವನಗರ—	1,37,951.
ರಾಜಕೋಟೆ—	1,32,069.
ಮಂಗಳೂರು—	1,17,083.

ಊರಿನ ಹೆಸರುಗಳನ್ನು ಸರಿಪಡಿಸಿದುದು

ಈ ಮೊದಲು, ಬ್ರಿಟಿಷರ ಆಡಳಿತದಲ್ಲಿ, ಆಂಗ್ಲ ಭಾಷೆಯಲ್ಲಿ ರೂಢಿಯಾಗಿ ಹೋಗಿದ್ದ ಕೆಲವು ಮುಖ್ಯ ಪಟ್ಟಣಗಳ ಹೆಸರುಗಳನ್ನು, ಭಾರತ ಸರಕಾರವು ಸರಿಪಡಿಸಿದೆ.

ಹಳೇ ಹೆಸರು.		ಹೊಸದು.
ಕೆಲಿಕಟ್	—	ಕೊೞಿಕೋಡ್.
ಕಾನ್ಪೂರ್	—	ಕಾನ್ಪುರ.
ಮತ್ರಾ	—	ಮಥುರಾ.
ಬೆನಾರಿಸ್	—	ಬನಾರಸ.
ಅಮ್ರೋಟಿ	—	ಅಮರಾವತಿ.
ಕೊಂಜೀವರಂ	—	ಕಾಂಚೀಪುರಂ.
ಎಲ್ಲೋರ್	—	ಎಲೂರು.
ಜಬ್ಬಲ್‌ಪುರ್	—	ಜಾಬಲಪುರ.

ಹಳೇ ಹೆಸರು.		ಹೊಸದು
ಗೇಂಜಸ್	—	ಗಂಗಾ.
ಮಡುರಾ	—	ಮಧುರೈ.
ಬೆಜವಾಡಾ	—	ವಿಜಯವಾಡಾ.
ವಿಝಗಪಟಾಂ	—	ವಿಶಾಖಪಟ್ಣ.
ರಾಮನಾಡ್	--	ರಾಮನಾಥಪುರಂ.
ಟಿನ್ನಪೆಲ್ಲಿ	—	ತಿರುನಲ್ವೇಲಿ.
ತಿರುವಾಡಿ	—	ತಿರುವಯ್ಯೂರು.
ತ್ರಿಚಿನಾಪಳ್ಳಿ	—	ತಿರುಚಿರಪಳ್ಳಿ.

ಉನ್ನತ ಕಟ್ಟಡಗಳು

ಭಾರತದ ಕೆಲವು ಪ್ರಸಿದ್ಧ ಉನ್ನತ ಕಟ್ಟಡಗಳ ಎತ್ತರವನ್ನು ಇಲ್ಲಿ ಕೊಡಲಾಗಿದೆ.

ಕುತುಬ್‌ಮಿನಾರ್—238 ಅಡಿ ಎತ್ತರ; 379 ಮೆಟ್ಟಿಲುಗಳು.
ಚಿತ್ತೂರಿನ ವಿಜಯಸ್ತಂಭ (ಪ್ರಾಸಾದ)—122 ಅಡಿ.
ಕಲ್ಕತ್ತೆಯ ವಿಕ್ಟೋರಿಯಾ ಮೆಮೊರಿಯಲ್—182 ಅಡಿ.
ತಾಜಮಹಾಲ್—178 ಅಡಿ.
ತಾಜಮಹಾಲಿನ ಸುತ್ತಲಿನ ನಾಲ್ಕು ಸ್ತಂಭಗಳು—137 ಅಡಿ.
ಹೈದರಾಬಾದಿನ ಚಾರ್‌ಮಿನಾರ್—186 ಅಡಿ.
ಬಿಜಾಪುರದ ಗೋಲ್‌ಗುಂಬಜ್—198 ಅಡಿ.
ಮಧುರೆಯ ಮೀನಾಕ್ಷಿ ದೇವಾಲಯದ ಗೋಪುರ—152 ಅಡಿ.
ಫತ್ತೆಪುರ ಸಿಕ್ರಿಯ ಬುಲಂದ್ ದರ್ವಾರ್ಝಾ—176 ಅಡಿ.
ಮುಂಬಯಿಯ ರಾಜಾಬಾಯಿ ಟವರ್—260 ಅಡಿ.
ಕಲ್ಕತ್ತಾ ಹೈಕೋರ್ಟು—180 ಅಡಿ.

ಭಾರತದ ಪಕ್ಷಗಳು (ರಾಜಕೀಯ ಮತ್ತು ಇತರ)

1. ಕಾಂಗ್ರೆಸ್. 2. ಹಿಂದೂ ಮಹಾಸಭಾ. 3. ರಾಷ್ಟ್ರೀಯ ಸ್ವಯಂ ಸೇವಕ ಸಂಘ. 4 ಸರ್ವೋದಯ ಸಮಾಜ. 5. ಕಿಸಾನ್ ಪಕ್ಷ. 6. ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್ (ಈಗ ಕಾಂಗ್ರೆಸ್ಸನ್ನು ಸೇರಿದೆ). 7. ಪ್ರಜಾಸೋಶಲಿಸ್ಟ್ ಪಕ್ಷ 8. ಕಮ್ಯೂನಿಸ್ಟ್ ಪಕ್ಷ. 9. ಅಖಿಲ ಭಾರತೀಯ ಜನಸಂಘ. 10. ಅಖಿಲ ಭಾರತ ಮುಸ್ಲಿಂ ಮಜ್ಲಿಸ್. 11. ಜಮಾಯತ್-ಉಲ್-ಉಲೇಮಾ-ಹಿಂದ್. 12. ಶಿಯಾ ರಾಜಕೀಯ ಪರಿಷದ. 13. ಮೂಮಿನ್ ಅನ್ಸಾರ್ ಪರಿಷದ.

(1951ನೇ ಮಹಾಚುನಾವಣೆಗಳ ಕಾಲದಲ್ಲಿ ಅನೇಕ ಹೊಸ ಪಕ್ಷಗಳು ತಲೆಯೆತ್ತಿದುವು; ಅಲ್ಲಲ್ಲಿ ಚುನಾವಣೆಗಳಲ್ಲಿ ಭಾಗವಹಿಸಿದುವು. ಅವುಗಳಲ್ಲಿ ಈ ಕೆಳಗಿನವು ಕೆಲವು:)

1. ರಾಮರಾಜ್ಯ ಪರಿಷದ. 2. ಅಕಾಲಿ. 3. ಲಾಲ್ ಕಮ್ಯೂನಿಸ್ಟ್. 4. ಜಮೀನ್ದಾರ್ ಲೀಗ್. 5. ಕೃಷಿಕರ್ ಲೋಕ್. 6. ಫಾರ್ವರ್ಡ ಲೀಗ್. 7. ಕಾಮನ್‌ವೆಲ್ತ್. 8 ಗಣತಂತ್ರ ಪರಿಷದ (ಒಡಿಸ್ಸ) 9. ಜನತಾ (ಬಿಹಾರ್).

ಗವರ್ನರ ಜನರಲರು: ಭಾರತವು ಸ್ವತಂತ್ರವಾದ ನಂತರ, ಗವರ್ನರ ಜನರಲರ (ವೈಸರೊಯಿಗಳ) ಸ್ಥಾನವು ಎರಡೇ ವರ್ಷಗಳಿಗೆ,

ಇಬ್ಬರಿಗೆ ಮಾತ್ರ ಕೊಡಲ್ಪಟ್ಟಿತ್ತು. 1947-48ರಲ್ಲಿ ಲೊರ್ಡ್ ಲೂಯಿ ಮೌಂಟ್ ಬೆಟನ್; 1948-49ರಲ್ಲಿ ಶ್ರೀ। ಚಕ್ರವರ್ತಿ ರಾಜಗೋಪಾಲಾಚಾರಿ. (1950ರಿಂದ ಈ ತನಕ ಡಾ। ರಾಜೇಂದ್ರ ಪ್ರಸಾದರವರೇ ಭಾರತ ಯೂನಿಯನಿನ ಅಧ್ಯಕ್ಷರಾಗಿರುವರು)

ಭಾರತದಲ್ಲಿ ಪ್ರಥಮ

ಅತಿ ಉದ್ದ ನದಿ—ಸಿಂಧು.
ಅತಿ ದೊಡ್ಡ ಸರೋವರ—ವುಲಾರ್ ಸರೋವರ, ಕಾಶ್ಮೀರ.
ಅತ್ಯುನ್ನತ ಪರ್ವತಶಿಖರ—ನಂದಾದೇವಿ, 25,660 ಅಡಿ.
(ಎವರೆಸ್ಟ್ ಪರ್ವತವು ತಿಬೇಟ್ ಪ್ರಾಂತದಲ್ಲಿದೆ,)
ಅತಿ ದೊಡ್ಡ ನಗರ (ಹೌರಾ ಕೂಡಿ)—ಕಲ್ಕತ್ತ;
ಜನಸಂಖ್ಯೆ 33,44,839.
ಅತ್ಯುನ್ನತ ಜಲಪಾತ—ಗೆರಸೊಪ್ಪೆ (ಜೋಗ್) 960 ಅಡಿ.
ಅತಿ ಹೆಚ್ಚು ಮಳೆ—ಚಿರ್ರಾಪುಂಜಿ; ವರ್ಷಕ್ಕೆ 426 ಇಂಚು.
ಅತಿ ವಿಸ್ತಾರ ಅರಣ್ಯಪ್ರದೇಶ ಪ್ರಾಂತ—ಅಸ್ಸಾಮ್.
ಅತಿ ವಿಸ್ತಾರ ಕುದುರು—ಸುಂದರಬಾಂಸ (8000 ಚದರಮೈಲು).
ಅತಿ ದೀರ್ಘ ಸೇತುವೆ—ಸೋನೆ (10,052 ಅಡಿ.)
ಅತಿ ದೊಡ್ಡ ಗುಹಾ-ದೇವಾಲಯ—ಎಲ್ಲೋರಾ (ಹೈದರಾಬಾದು).
ಅತಿ ಉದ್ದ ದೇವಾಲಯ ಪ್ರವೇಶದ ಒಳಭಾಗ—ರಾಮೇಶ್ವರ
ದೇವಾಲಯ (4000 ಅಡಿ).
ಅತಿ ದೊಡ್ಡ ಮಸೀದಿ—ಜುಮ್ಮಾ ಮಸೀದಿ, ಢಿಲ್ಲಿ.
ಅತಿ ವಿಸ್ತಾರ ಕಬ್ಬಿನ ಕ್ಷೇತ್ರ—ಉತ್ತರ ಪ್ರದೇಶ.
ಅತಿ ಉದ್ದ ವಿದ್ಯುತ್ ರೈಲ್ವೆ ಮಾರ್ಗ—ಮುಂಬಯಿ-ಪುಣೆ.
ಅತ್ಯುನ್ನತ ಅಣೆಕಟ್ಟು—ಭಾಕ್ರಾ ನಂಗಾಲ್ (680 ಅಡಿ)
ಅತ್ಯುನ್ನತ ದ್ವಾರ—ಬುಲಂದ್ ದರ್ವಾಜಾ (ಫತ್ತೇಪುರ ಸಿಕ್ರಿ, 176 ಅಡಿ).
ಅತ್ಯುನ್ನತ ಶಿಲಾವಿಗ್ರಹ—ಗೋಮಟೇಶ್ವರ (ಶ್ರವಣಬೆಳಗೊಳ).
ಅತಿ ದೀರ್ಘ ರೈಲ್ವೆ ಪ್ಲೆಟ್‌ಫ್ಲೋರ್ಮ್ ಸೋನೆಪುರ (2415 ಅಡಿ).
ಅತಿ ದೀರ್ಘ ರಸ್ತೆ—ಗ್ರೇಂಡ್ ಟ್ರಂಕ್ ರಸ್ತೆ (1500 ಮೈಲು).

ಅತ್ಯುನ್ನತ ಸ್ತಂಭ—ಕುತುಬ್ ಮಿನಾರ್, ಢಿಲ್ಲಿ.
ಅತಿ ದೊಡ್ಡ ಗುಮ್ಮಟ—ಗೋಲ್‌ಗುಂಬಜ್, ಬಿಜಾಪುರ.
ಅತಿ ದೊಡ್ಡ ಜಾನುವಾರು ಸಂತೆ—ಸೋನೆಪುರ ಸಂತೆ.
ಅತಿ ದೊಡ್ಡ ಮೃಗಾಲಯ—ಅಲಿಪುರ, (ಕಲ್ಕತ್ತ).
ಅತಿ ದೊಡ್ಡ ವಸ್ತುಸಂಗ್ರಹಾಲಯ—ಕಲ್ಕತ್ತದಲ್ಲಿದೆ.
ಅತಿ ಜನನಿಬಿಡ ರಾಜ್ಯ—ಉತ್ತರಪ್ರದೇಶ.

ಭಾರತೀಯರಲ್ಲಿ ಪ್ರಪ್ರಥಮರು

ಭಾರತೀಯ ಗವರ್ನರ್—ಲೊರ್ಡ್ ಸಿಂಹ.
F. R. S. ಪದವೀಧರ—ಎ. ಕಾರ್ಸೆಟ್ಜಿ.
ಕೊಂಗ್ರೆಸ್ ಅಧ್ಯಕ್ಷ—ಡಬ್ಲ್ಯು. ಸಿ. ಬೆನರ್ಜಿ.
ನೊಬೆಲ್ ಪಾರಿತೋಷಕ—ರವೀಂದ್ರನಾಥ ಠಾಕೂರ,
(ಎರಡನೆಯವರು ಸಿ. ವಿ. ರಾಮನ್).
ಐ. ಸಿ. ಎಸ್.—ಸತ್ಯೇಂದ್ರನಾಥ ಠಾಕೂರ.
ಬಾರ್-ಎಟ್-ಲೊ—ಜೆ. ಎಮ್. ಠಾಕೂರ.
ಹೈಕೋರ್ಟ್ ಜಡ್ಜ—ರಾಮಪ್ರಸಾದ ರೊಯ್.
ಮಹಿಳಾಮಂತ್ರಿ—ವಿಜಯಲಕ್ಷ್ಮಿ ಪಂಡಿತ್.
ಮಹಿಳಾ ಕೊಂಗ್ರೆಸ್ ಅಧ್ಯಕ್ಷೆ—ಸರೋಜಿನಿ ನಾಯುಡು.
ವಿಕ್ಟೋರಿಯಾ ಕ್ರೊಸ್—ಖುದಾದಾದ ಖಾನ್.
ಸರ್ವಸೇನಾಧಿಪತಿ—ಜನರಲ್ ಕಾರಿಯಪ್ಪ.
ಐ. ಎಮ್. ಎಸ್.—ಡಾ। ಗೂಡದೇವ ಚಕ್ರವರ್ತಿ.
ಮಹಿಳಾ ಎಮ್. ಎ.—ಚಂದ್ರಮುಖಿ ಬೋಸ್.
ಮಹಿಳಾ ಬೆರಿಸ್ಟರ್—ಕೊರ್ನೆಲಿಯಾ ಸೊರಾಬ್ಜಿ.

ಭಾರತದಲ್ಲಿ ಪ್ರಥಮತಃ ಅಂಚೆಚೀಟು, ಸಿಂಧದಲ್ಲಿ 1825ರಲ್ಲಿ ಹೊರಡಿಸಲ್ಪಟ್ಟಿತು. ಟೆಲಿಗ್ರಾಫ್ ಲೈನು, ಕಲ್ಕತ್ತದಿಂದ ಡಾಯ್ಮಂಡ್ ಹಾರ್ಬರಿಗೆ 1851ರಲ್ಲಿ ತೆರೆಯಲ್ಪಟ್ಟಿತು. ಮೊದಲನೆ ರೈಲುಬಂಡಿಯು 1853ರಲ್ಲಿ (ಎಪ್ರಿಲ್) ಮುಂಬಯಿಯಿಂದ ಕಲ್ಯಾಣಕ್ಕೆ ಓಡಿತು. ಅಖಿಲ ಭಾರತದಲ್ಲಿ ವ್ಯಾಪಕವಾಗಿ ಅಂಚೆಚೀಟು 1854ರಲ್ಲಿ ಹೊರಡಿಸಲ್ಪಟ್ಟಿತು. ಮೊದಲನೆ

ವಿದ್ಯುತ್ ಯಂತ್ರವು 1897–98ರಲ್ಲಿ ಡಾರ್ಜಿಲಿಂಗ್‌ದಲ್ಲಿ ಜೋಡಿಸಲ್ಪಟ್ಟಿತು. ಪ್ರಥಮ ವಿಮಾನ ಟಪ್ಪಾಲು 1911ರಲ್ಲಿ ಬಮ್ರೋಲಿಯಿಂದ ನೈನಿ (ಅಲ್ಲಹಾಬಾದಕ್ಕೆ) ಆರು ಮೈಲುಗಳ ಅಂತರಕ್ಕೆ ಆರಂಭಿಸಲ್ಪಟ್ಟಿತು. ಮೊದಲನೇ ವಿದ್ಯುತ್ ರೈಲ್ವೆ ಬಂಡಿಯು 1925ರಲ್ಲಿ ಮುಂಬಯಿಯಿಂದ ಕುರ್ಲಾ ಸ್ಟೇಷನ್ ತನಕ ಓಡಿತು. ಪ್ರಥಮ ವಿಮಾನ ಅಂಚೆಚೀಟು 1929ರಲ್ಲಿ ಹೊರಡಿಸಲ್ಪಟ್ಟಿತು.

"ಭಾರತರತ್ನ" ಬಿರುದಾಂಕಿತರು

(ಕಲೆ, ಸಾಹಿತ್ಯ ಮತ್ತು ವಿಜ್ಞಾನ ಪ್ರಗತಿಗೆ ಬಹುಮುಖವಾಗಿ ಅಂಶದಾನ ಸಲಿಸಿದ ಹಾಗು ಅತ್ಯುಚ್ಚರೀತಿಯಲ್ಲಿ ಸಾರ್ವಜನಿಕ ಸೇವೆಸಲಿಸಿದವರ ಬಗ್ಗೆ, ಭಾರತ ಗಣರಾಜ್ಯದಲ್ಲಿರುವ ಸರ್ವಶ್ರೇಷ್ಠ ಪ್ರಶಸ್ತಿಯೇ 'ಭಾರತರತ್ನ'. ಕಳೆದ ಎರಡು ವರ್ಷಗಳಲ್ಲಿ ಈ ಕೆಳಗಿನವರಿಗೆ 'ಭಾರತರತ್ನ ಪ್ರಶಸ್ತಿ' ಕೊಡಲಾಗಿದೆ.)

1954	1955
ಸಿ. ರಾಜಗೋಪಾಲಾಚಾರಿ	ಬಾಬು ಭಗವಾನದಾಸ
ಎಸ್. ರಾಧಾಕೃಷ್ಣನ್	ಎಮ್. ವಿಶ್ವೇಶ್ವರಯ್ಯ
ಸಿ. ವಿ. ರಾಮನ್	ಜವಾಹರಲಾಲ ನೆಹರು.

ದ್ವಿತೀಯ ಶ್ರೇಣಿಯ ಪ್ರಶಸ್ತಿಯಾಗಿ, 1954ರಲ್ಲಿ "ಪದ್ಮವಿಭೂಷಣ" ದೊರೆತವರು: 1. ಬಿ. ಜಿ. ಖೇರ್. 2. ವಿ. ಕೆ. ಕೃಷ್ಣ ಮೆನನ್. 3. ನಂದಲಾಲ ಬೋಸ್. 4. ಎಸ್. ಎಸ್. ಬೋಸ್. 5. ಜಾಕೀರ್ ಹುಸ್ಸೇನ್. 1955ರಲ್ಲಿ 1. ಬಿ. ಕೆ. ಕಾರ್ವೆ. 2. ಜೆ. ಆರ್. ಡಿ. ತಾತಾ.

ಗಣನೀಯ ಭಾರತೀಯರು

ಹೆಸರು.	ಜನನ.	ಮರಣ.
ಸರ್ ಕೆ ಶೇಷಾದ್ರಿ ಅಯ್ಯರ್	1845	1901
ಎಮ್. ಜಿ. ರಾನಡೆ (ಸುಧಾರಕರು)	1842 (18, ಜ)	1904
ದೇವೇಂದ್ರನಾಥ ಠಾಕೂರ	1817	1905
ಗೋಪಾಲಕೃಷ್ಣ ಗೋಖಲೆ	1866	1915
ಸರ್ ಫಿರೋಜ್ ಷಾ ಮೆಹತಾ	1845	1915
ಲೋಕಮಾನ್ಯ ಬಾಲಗಂಗಾಧರ ತಿಲಕ	1856	1920

ರಾಮಾನುಜನ್ (ಅದ್ಭುತ ಗಣಿತಜ್ಞ)		1920
ಸರ್ ಎನ್. ಜಿ. ಚಂದಾವರ್ಕರ್	1855	1923
ಸಿ. ಆರ್. ದಾಸ್	1870(5, ನವಂ.)	1924 (25, ಮೇ.)
ಲಾಲಾ ಲಜಪತ ರೈ	1865	1928
ಪಂಡಿತ ಮೋತಿಲಾಲ ನೆಹರು	1861 (6, ಮೇ.)	1931 (6, ಫೆ.)
ಜೆ. ಎಮ್. ಸೇನಗುಪ್ತ	1885	1933 (23, ಜುಲೈ)
ವಿಠ್ಠಲಭಾಯಿ ಪಟೇಲ್	....	1936
ಡಾ| ಎಮ್. ಎ. ಅನ್ಸಾರಿ	1880	1936
ಸರ್ ಜಗದೀಶಚಂದ್ರ ಬೋಸ್	1858 (30, ನ.)	1937 (23, ನ.)
ಶರತಚಂದ್ರ ಚತರ್ಜಿ	1867	1938
ಸರ್ ಮುಹಮ್ಮದ್ ಇಕ್ಬಲ್	1887	1938
ರವೀಂದ್ರನಾಥ ಠಾಕೂರ	1861 (7, ಮೇ.)	1941(7, ಅಗೋ.)
ಮಹಾತ್ಮಾ ಗಾಂಧಿ	1869(2, ಅಕ್ಟೋ.)	1948 (30, ಜ.)
ಸರೋಜಿನಿ ನಾಯ್ಡು	1879 (13, ಫೆ.)	1949 (1, ಮಾ.)
ಅರವಿಂದ ಘೋಷ್	1872(15, ಅಗೋ)	1950 (5, ದಶಂ.)
ಸರದಾರ ವಲ್ಲಭಭಾಯಿ ಪಟೇಲ್	1875	1950(15, ದಶಂ.)
ಡಾ| ಶ್ಯಾಮಪ್ರಸಾದ ಮುಖರ್ಜಿ	1901	1953(23, ಜೂ.)
ದಾದಾಭಾಯಿ ನೌರೋಜಿ	1825	1917
ಈಶ್ವರಚಂದ್ರ ವಿದ್ಯಾಸಾಗರ	1820 (26, ಸೆ.)	1891(29, ಜುಲೈ)
ರಾಜಾರಾಮ ಮೋಹನ ರೊಯ್	1774	1833
ರಾಮಕೃಷ್ಣ ಪರಮಹಂಸ	1834 (20, ಫೆ.)	1886(16, ಅಗೋ)
ದಯಾನಂದ ಸರಸ್ವತಿ	1824	1883
ಬಂಕಿಮ್ ಚಂದ್ರ ಚತರ್ಜಿ	1838(26, ಜೂ.)	1894 (8, ಎಪ್ರಿ.)
ಸ್ವಾಮಿ ವಿವೇಕಾನಂದ	1862 (12, ಜ.)	1902 (2, ಜುಲೈ)
ಭಗಿನಿ ನಿವೇದಿತಾ	1867(26 ಅಕ್ಟೋ.)	1911(13 ಅಕ್ಟೋ.)
ಪಂಡಿತ ಮದನ ಮೋಹನ ಮಾಲವೀಯ	1 61(26, ದಶಂ.)	1946(12, ನವಂ.)
ಸುಭಾಷಚಂದ್ರ ಬೋಸ್	1897(23, ಜ.)	1945(23, ಅಗೋ)
ಸುರೇಂದ್ರನಾಥ ಬೆನರ್ಜಿ	1848(10, ನವಂ.)	1925(6, ಅಗೋ.)

ಭಾರತ ಪಾರ್ಲಿಮೆಂಟು

ಭಾರತ ಪಾರ್ಲಿಮೆಂಟಿನಲ್ಲಿ ಲೋಕಸಭೆ (ಜನತಾ) ಮತ್ತು ರಾಜ್ಯಸಭೆ (ರಾಜ್ಯಗಳದು) ಹೀಗೆ ಎರಡು ವಿಭಾಗಗಳಿವೆ. ಲೋಕಸಭೆಯಲ್ಲಿ, ಪ್ರತಿ 750,000 ಪ್ರಜೆಗಳಿಗೊಬ್ಬರಂತೆ ಸದಸ್ಯರ ಆಯ್ಕೆಯಾಗುವುದು. ಸದಸ್ಯರ ಸಂಖ್ಯೆ 500ಕ್ಕೆ ಮೀರಿಲ್ಲ. ಸದಸ್ಯತನದ ಅವಧಿ ಐದು ವರ್ಷಗಳದು. ಐದನೇ ವರ್ಷಾಂತ್ಯದಲ್ಲಿ ತಿರಿಗಿ ಚುನಾವಣೆಗಳು ನಡೆವುವು. ರಾಜ್ಯಸಭೆಯಲ್ಲಿ 250ಕ್ಕೆ ಮಿಕ್ಕಿ ಸದಸ್ಯರಿಲ್ಲ; ಇವರಲ್ಲಿ, ಅಧ್ಯಕ್ಷರಿಂದ ನೇಮಿಸಲ್ಪಡುವವರು 12 ಮಂದಿ.

ರಾಷ್ಟ್ರೀಯ ಗ್ರಂಥಾಲಯ: ಭಾರತದ ರಾಷ್ಟ್ರೀಯ ಗ್ರಂಥಾಲಯವು ಕಲ್ಕತ್ತೆಯಲ್ಲಿದೆ. ಈ ಗ್ರಂಥಾಲಯದಲ್ಲಿ ಸುಮಾರು ಹತ್ತು ಲಕ್ಷ ಪುಸ್ತಕಗಳಿದ್ದು, ಇದು ಜಗತ್ತಿನ ದೊಡ್ಡ ಗ್ರಂಥಾಲಯಗಳಲ್ಲಿ ಒಂದು ಎನಿಸಿದೆ.

ಟಪ್ಪಾಲಾಫೀಸುಗಳು: ಭಾರತದಲ್ಲಿ ಪ್ರತಿ 27 ಚದರ ಮೈಲುಗಳಿಗೆ ಅಥವಾ ಪ್ರತಿ 7773 ಜನರಿಗೆ ಒಂದರಂತೆ ಟಪ್ಪಾಲಾಫೀಸು ಇದೆ.

ಚಲಚ್ಚಿತ್ರ

ಭಾರತದಲ್ಲಿರುವ ಚಲಚ್ಚಿತ್ರ ಪ್ರದರ್ಶನ ಮಂದಿರಗಳು 3250. ಇವುಗಳಲ್ಲಿ ಸಂಚಾರಿ ಪ್ರದರ್ಶನ ಮಂದಿರಗಳು 850.

ಭಾರತದ ಚಲಚ್ಚಿತ್ರ ಕೈಗಾರಿಕೆಯಲ್ಲಿ ಒಟ್ಟಿಗೆ 42 ಕೋಟಿ ರೂಪಾಯಿ ಬಂಡವಾಳ ಬಿದ್ದಿದೆ. ವರ್ಷಂಪ್ರತಿ ಒಟ್ಟು ಉತ್ಪತ್ತಿ ಒಂದು ಕೋಟಿ ರೂಪಾಯಿಗಳು.

ದೇಶದಲ್ಲೀಗ 60 ಸ್ಟುಡಿಯೋಗಳು, 40 ಲಿಬೊರೆಟರಿಗಳು, 330 ಚಲಚ್ಚಿತ್ರ ನಿರ್ಮಾತೃಗಳು, ಮತ್ತು 6600 ಮಂದಿ ವಿತರಣಾಧಿಕಾರಿಗಳು ಇರುವರು. ಈ ಕೈಗಾರಿಕೆಯಲ್ಲಿ ಸುಮಾರು 70,000 ಜನರು ನೇಮಿತರಾಗಿರುವರು.

ಭಾರತದಲ್ಲಿ ಸರ್ವ ಪ್ರಥಮವಾಗಿ ಚಲಚ್ಚಿತ್ರವು, 1896ನೇ ಜುಲೈ ತಾ. 7ರಲ್ಲಿ, ಲುಮಿಯೆರೆ ಸಹೋದರರಿಂದ ಪ್ರದರ್ಶಿಸಲ್ಪಟ್ಟಿತು.

ಪ್ರಥಮ ಚಲಚ್ಚಿತ್ರ ಮಂದಿರವು ಕಲ್ಕತ್ತೆಯಲ್ಲಿ ಜೆ. ಎಫ್. ಮದನ ಎಂಬವರಿಂದ 1907ರಲ್ಲಿ ತೆರೆಯಲ್ಪಟ್ಟಿತು.

ಪ್ರಥಮ ಚಲಚ್ಚಿತ್ರವು ("ಹರಿಶ್ಚಂದ್ರ") ಡಿ. ಫಾಲ್ಕೆಯವರಿಂದ ಮುಂಬಯಿಯಲ್ಲಿ ತಯಾರಿಸಲ್ಪಟ್ಟು, 1916ನೇ ಏಪ್ರಿಲ್ 13ರಲ್ಲಿ ಪ್ರದ

ಶಿಸಲ್ಪಟ್ಟಿತು. ಬಂಗಾಳದಲ್ಲಿ ಪ್ರಥಮ ಹಿಂದೀ ಚಲಚ್ಚಿತ್ರವು ("ನಳದಮಯಂತಿ") ಜೆ. ಎಫ್. ಮದನ ಎಂಬವರಿಂದ 1917ರಲ್ಲಿ ತಯಾರಿಸಲ್ಪಟ್ಟಿತು.

ದಕ್ಷಿಣ ಭಾರತದಲ್ಲಿ, "ಈಜಿಪ್ಟ ಫಿಲ್ಮ್ ಕಂಪೆನಿ"ಯವರು, 1921ರಲ್ಲಿ ಪ್ರಥಮವಾಗಿ ಚಿತ್ರ ತಯಾರಿಸಿದರು ("ಭೀಷ್ಮಪ್ರತಿಜ್ಞಾ").

ವಿನೋದ ತೆರಿಗೆಯು ಭಾರತದಲ್ಲಿ ಪ್ರಥಮವಾಗಿ, ಬಂಗಾಳದಲ್ಲಿ 1922ರಲ್ಲಿ ಜಾರಿಗೆ ತರಲ್ಪಟ್ಟಿತು.

ಪ್ರಥಮ ಹಿಂದೀ ವಾಕ್ಚಿತ್ರ—"ಆಲಂ ಆರಾ", ಮುಂಬಯಿಯ ಇಂಪೀರಿಯಲ್ ಫಿಲ್ಮ್ ಸ್ಟುಡಿಯೋದವರಿಂದ 1931ನೇ ಮಾರ್ಚ ತಾ. 14ರಲ್ಲಿ ಬಿಡುಗಡೆಮಾಡಲ್ಪಟ್ಟಿತು. ಎರಡನೇ ವಾಕ್ಚಿತ್ರ "ಶಿರಿನ್ ಫರಾದ್" — ಕಲ್ಕತೆಯ ಮದನ ಥಿಯೇಟರ್ಸ್‌ರವರದು.

ಪ್ರಥಮ ತ್ರಿವರ್ಣ ಚಿತ್ರವು, ಪ್ರಭಾತ ಸ್ಟುಡಿಯೋದವರ "ಸೈರೇಂಧ್ರಿ" —1931ರಲ್ಲಿ.

ಇಂಗ್ಲಿಷ್ ಭಾಷೆಯಲ್ಲಿ ತಯಾರಿಸಲ್ಪಟ್ಟ ಪ್ರಥಮ ಭಾರತೀಯ ವಾಕ್ಚಿತ್ರ "ಕರ್ಮ" (ಹಿಮಾಂಶು ರೈಗಳವರಿಂದ.)

ಮೂಲಭೂತ ಹಕ್ಕುಗಳು

ಭಾರತ ಸಂವಿಧಾನದಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳು ಈ ಕೆಳಗಿನಂತೆ ನಮೂದಿಸಲ್ಪಟ್ಟವೆ:

1. ಸಮಾನತೆ. 2. ಸ್ವಾತಂತ್ರ್ಯದ ಹಕ್ಕುಗಳು. 3. ಶೋಷಣೆಗೆದುರಾಗಿರುವ ರಕ್ಷಣೆ. 4. ಧಾರ್ಮಿಕ ಸ್ವಾತಂತ್ರ್ಯ. 5. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು. 6. ಆಸ್ತಿ, ಸೊತ್ತುಗಳ ಹಕ್ಕುಗಳು. 7. ಸಂವಿಧಾನ ಮೂಲಕ ಚಿಕಿತ್ಸಿಸುವ ಹಕ್ಕುಗಳು.

ಯಾವನೇ ಪ್ರಜೆಯ ವಿಷಯವಾಗಿ ಭೇದಭಾವ ತೋರುವುದು ನಿಷೇಧಿಸಲ್ಪಟ್ಟಿದೆ.

ಸ್ವಾತಂತ್ರ್ಯದ ಹಕ್ಕುಗಳೆಂಬಲ್ಲಿ— ಭಾಷಣ ಸ್ವಾತಂತ್ರ್ಯ, ಆಯುಧ ವಿರಹಿತರಾಗಿ ಸಭೆ ಸೇರಿಸೋಣ, ಸಂಘಗಳ ರಚನೆ; ಭಾರತದಲ್ಲಿ ಎಲ್ಲಿಯೂ ನಿರಾತಂಕವಾಗಿ ಸಂಚರಿಸುವ ಹಕ್ಕು; ಭಾರತದ ಯಾವದೇ ಭಾಗದಲ್ಲಿ ವಾಸಿಸುವ–ನೆಲಸುವ ಹಕ್ಕು; ಭಾರತದಲ್ಲೆಲ್ಲಿಯೂ ಆಸ್ತಿಪಾಸ್ತಿಗಳನ್ನು ಕೊಂಡುಕೊಳ್ಳುವ ಮತ್ತು ವಿಕ್ರಯಿಸುವ ಹಕ್ಕು; ಯಾವುದೇ ಕಾನೂನು

ಬದ್ಧ ವೃತ್ತಿ, ವ್ಯಾಪಾರ ಮುಂತಾದುವನ್ನು ನಡೆಸುವ ಹಕ್ಕುಗಳು--ಇವು ನಮೂದಿಸಲ್ಪಟ್ಟವೆ.

ಧಾರ್ಮಿಕ ಸ್ವಾತಂತ್ರ್ಯದಲ್ಲಿ, ಸಾರ್ವಜನಿಕ ಶಾಂತಿ ಮುಂತಾದುವನ್ನು ಗಮನದಲ್ಲಿರಿಸಿ, ಯಾರೂ ತಮಗೆ ಹಿತಕಂಡ ಮತವನ್ನವಲಂಬಿಸಿ, ತಂತಮ್ಮ ಧರ್ಮಾನುಸಾರ ನಡಕೊಳ್ಳಬಹುದು.

ಶೋಷಣೆಯಿಂದ ರಕ್ಷಣೆ ಹೊಂದುವ ಹಕ್ಕುಗಳಲ್ಲಿ, ಮಾನವ ವಿಕ್ರಯ, ಪ್ರತಿಫಲ ತೆರದೆ ಮಾಡಿಸುವ ಬಲಾತ್ಕಾರದ ಶ್ರಮ ಮುಂತಾದುವು ನಿಷೇಧಿಸಲ್ಪಟ್ಟವೆ.

ಪ್ರಾದೇಶಿಕ ಭಾಷೆಗಳನ್ನಾಗಿ ಭಾರತದಲ್ಲಿ ಅಸ್ಸಾಮಿ, ಬಂಗಾಳಿ, ಗುಜರಾಥಿ, ಹಿಂದಿ, ಕನ್ನಡ, ಕಾಶ್ಮೀರಿ, ಮಲೆಯಾಳ, ಮರಾಠಿ, ಒರಿಯಾ, ಪಂಜಾಬಿ, ಸಂಸ್ಕೃತ, ತಮಿಳು, ತೆಲುಗು ಮತ್ತು ಉರ್ದು ಇವುಗಳಲ್ಲಾವು ದಾದರೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಭಾಷೆಗಳ ಉಪಯೋಗ ವನ್ನು ಭಾರತ ಸಂವಿಧಾನವು ಗುರುತಿಸುವುದು.

ಪದವೀಧರರು, ಅವರ ಸ್ಥಾನಗಳು

ಆಯಾ ಅಧಿಕಾರಕ್ಕನುಸರಿಸಿ, ಅಧಿಕಾರಿಗಳ ಸ್ಥಾನ (ಶ್ರೇಣಿ) ಈ ತೆರನಿದೆ:

ಪ್ರಥಮವಾಗಿ—ರಾಷ್ಟ್ರಾಧ್ಯಕ್ಷರು.

ದ್ವಿತೀಯ—ಭಾರತದ ಪ್ರಧಾನ ಸಚಿವರು.

ತೃತೀಯ—ಗವರ್ನರರು.

ಚತುರ್ಥ—ಭಾರತದ ಉಪಾಧ್ಯಕ್ಷರು.

ಪಂಚಮ—ಮಾಜಿ ಅಧ್ಯಕ್ಷರು, ಮಾಜಿ ಗವರ್ನರ ಜನರಲರು.

ಐದನೆ—ಲೆಫ್ಟನೆಂಟ್ ಗವರ್ನರರು; ಆರನೇ—ರಾಯಭಾರಿಗಳು; ಏಳನೇ—ಭಾರತದ ಸರ್ವಶ್ರೇಷ್ಠ ನ್ಯಾಯಾಧೀಶರು; ಎಂಟನೇ—ಕೇಂದ್ರದ ಮಂತ್ರಿಗಳು; ಇತ್ಯಾದಿ (ಒಟ್ಟು 27 ತರಗತಿಗಳನ್ನು ಕೊಡಲಾಗಿದೆ.)

ಅಂಚೆ ಚೀಟುಗಳು

ಸ್ವಾತಂತ್ರ್ಯ ಪ್ರಾಪ್ತ(1947)ವಾದಂದಿನಿಂದ 1956ರ ವರೆಗೆ ಭಾರ ತವು ಹದಿನೆಂಟು ಸಾರಿ ಹೊಸ ಅಂಚೆಚೀಟುಗಳನ್ನು ಹೊರಡಿಸಿದೆ. (1956 ರಲ್ಲಿ ಬುದ್ಧಜಯಂತಿ ಮತ್ತು ತಿಲಕರ ಶತಾಬ್ದಿ ಚೀಟುಗಳು.)

ಪಾಕಿಸ್ಥಾನದ ಕೆಲವು ಅಂಕೆಸಂಖ್ಯೆಗಳು

1947ರಲ್ಲಿ, ಭಾರತವು ವಿಚ್ಛೇದಿಸಲ್ಪಟ್ಟು, ಭಾರತ ಮತ್ತು ಪಾಕಿಸ್ಥಾನಗಳ ರಚನೆಯಾಯಿತು. ಪಾಕಿಸ್ಥಾನವು ಪಶ್ಚಿಮ ಮತ್ತು ಪೂರ್ವ ಹೀಗೆ ಎರಡು ಕಡೆಗಳಲ್ಲಿದೆ. ನಡುವೆ ಭಾರತದ ಪ್ರದೇಶವಿದೆ. 1955ನೇ ಸಪ್ಟಂಬರದಲ್ಲಿ ಪಾಕಿಸ್ಥಾನ ಕೊನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯು (ಘಟನಾ ಸಮಿತಿ) ನಿರ್ಣಯಿಸಿದಂತೆ ಪಾಕಿಸ್ಥಾನವು ಈ ತೆರನಿದೆ: ಕರಾಚಿ ಹೊರತಾಗಿ ಸಿಂಧ, ಪಂಜಾಬ, ವಾಯುವ್ಯ ಗಡಿಪ್ರಾಂತ್ಯ, ಬಲೂಚಿಸ್ಥಾನ, ಬಹಾವಲಪುರ, ಮೀರ್‌ಪುರ, ಖೈರಪುರ ಮತ್ತು ಗಡಿರಾಜ್ಯಗಳು. ಕರಾಚಿಯು ಕೇಂದ್ರದ ಆಡಳಿತದಲ್ಲಿರುವ ಪ್ರತ್ಯೇಕ ಪ್ರದೇಶ.

ಪೂರ್ವ ಪಾಕಿಸ್ಥಾನವು, 1947ರ ಮೊದಲಿನ ಬಂಗಾಳ ಪ್ರಾಂತ್ಯದ ⅔ ಅಂಶ ಮತ್ತು ಅಸ್ಸಾಮಿನಲ್ಲಿನ ಚಿಕ್ಕ ಪ್ರದೇಶವು ಕೂಡಿದ್ದಾಗಿದೆ. ಡಾಕ್ಕಾ ನಗರವು ಪೂರ್ವ ಪಾಕಿಸ್ಥಾನದ ರಾಜಧಾನಿ.

ಘಟನಾ ಸಮಿತಿಯು ನಿರ್ಣಯಿಸಿದಂತೆ, ಪಾಕಿಸ್ಥಾನದ ಸರ್ವಶ್ರೇಷ್ಠ ಅಧಿಕಾರಕ್ಕೆ ಮುಸ್ಲಿಮರೇ ನೇಮಿಸಲ್ಪಡಬೇಕು. (ಭಾರತದಲ್ಲಿ ಈ ಜಾತೀಯತೆಯ ನಿಯಮವಿಲ್ಲ.)

ಪಾಕಿಸ್ಥಾನದ ಜನಸಂಖ್ಯೆ

	ಚದರ ಮೈಲುಗಳು	ಜನಸಂಖ್ಯೆ (ಸಾವಿರಗಳಲ್ಲಿ)
ಪಾಕಿಸ್ಥಾನ	364,737	7,53,42
ಬಲೂಚಿಸ್ಥಾನ	54,456	6,22
ಬಲೂಚಿಸ್ಥಾನ ರಾಜ್ಯಗಳು	79,516	5,52
ಪೂರ್ವ ಬಂಗಾಳ	54,501	4,20,63
ಕರಾಚಿ	812	11,26
ವಾಯುವ್ಯ ಗಡಿಪ್ರಾಂತ್ಯ	13,560	32,53
,, ,, ಪ್ರದೇಶಗಳು	25,699	25,47
ಪಂಜಾಬ	62 245	1,88,28
ಬಹಾವಲ್ಪುರ	17,471	18,23
ಸಿಂಧ	50,307	46,08
ಖೈರಪುರ ಸಂಸ್ಥಾನ	6,050	2,20

Edited, Printed & Published by K. V. Shenoy
at the Prabhat Printers, Ltd., Mangalore.